**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಸಕಲೇಶಪುರ**
**C.C.No.677/2018**

| | | |
|---|---|---|
| **ಹೆಸರುಃ** | **ಮೀನಾಕ್ಷಿ** | **CW-7** |
| **ತಂದೆ/ಗಂಡ ಹೆಸರುಃ** | **ಪ್ರಭುಸ್ವಾಮಿ** | **PW-5** |
| **ವಯಸ್ಸುಃ** | **49 ವರ್ಷ** | |
| **ವೃತ್ತಿಃ** | **ಹೋಟೆಲ್ ವ್ಯಾಪಾರ** | |
| **ವಿಳಾಸಃ** | **ಬಾಳ್ಳುಪೇಟೆ** | **ದಿನಾಂಕಃ 25-11-2024** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ನನಗೆ ಆರೋಪಿ ಪರಿಚಯ ಇರುತ್ತದೆ. ಆರೋಪಿ ನಮ್ಮ ಹೋಟೆಲ್ ಪಕ್ಕ ಫೈನಾನ್ಸ್ ಕಛೇರಿ ಇಟ್ಟುಕೊಂಡಿದ್ದರು. ಅವರು ವಡವೆಗಳನ್ನು ಗಿರವಿ ಇಟ್ಟುಕೊಳ್ಳುತ್ತಿದ್ದರು. ನಾನು ವಡವೆಯನ್ನು ಗಿರವಿ ಇಟ್ಟಿದ್ದೆ. ನಂತರ ಆರೋಪಿ ಮುತ್ತೂಟ್ ಫೈನಾನ್ಸ್ ನಲ್ಲಿ ವಡವೆ ಇಟ್ಟಿದ್ದರು. ಅವುಗಳನ್ನು ನ್ಯಾಯಾಲಯದ ಮುಖಾಂತರ ಬಿಡಿಸಿಕೊಂಡಿರುತ್ತೇನೆ. ನಾನು ಆರೋಪಿ ಬಳಿ 140 ಗ್ರಾಂ ಚಿನ್ನವನ್ನು ಗಿರವಿ ಇಟ್ಟಿದ್ದೆ. ನಾನು ವಡವೆಯನ್ನು ಗಿರವಿ ಇಟ್ಟ ನಂತರ ಆರೋಪಿ ಪರಾರಿಯಾಗಿದ್ದರಿಂದ ಈ ಕೇಸನ್ನು ಕೊಟ್ಟಿರುತ್ತೇವೆ. ಆರೋಪಿ ಚೀಟಿ ವ್ಯವಹಾರದಲ್ಲಿ ನಷ್ಟ ಹೊಂದಿದ್ದರಿಂದ ಓಡಿ ಹೋಗಿದ್ದರು. ಸಾಕ್ಷಿಯು ಏಳು ಪೋಟೋಗಳಲ್ಲಿನ ವಡವೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-15 ರಿಂದ 21 ಎಂದು ಗುರುತಿಸಲಾಯಿತು. ಆರೋಪಿಗೆ ಸಿ ಆರ್ ಎಸ್ ಫೈನಾನ್ಸ್ ಎಂಬ ಕಂಪನಿ ಇತ್ತು. ನನ್ನ 140 ಗ್ರಾಂ ಚಿನ್ನದ ಅಂದಾಜು ಮೊತ್ತ ನನಗೆ ಗೊತ್ತಿಲ್ಲ. ಆರೋಪಿ ವಡವೆಯನ್ನು ಗಿರವಿ ಇಟ್ಟುಕೊಂಡು ಓಡಿ ಹೋಗಿದ್ದರಿಂದ ನಮಗೆ ತುಂಬಾ ತೊಂದರೆಯಾಗಿರುತ್ತದೆ. ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಕೆ ಎಂ ವಕೀಲರಿಂದಃ**

ನನಗೆ ಆರೋಪಿ 2017 ರಿಂದ ಪರಿಚಯ ಇರುತ್ತಾರೆ. ಅವರು ನಮ್ಮ ಹೋಟೆಲ್ ಪಕ್ಕದಲ್ಲಿ ಕಛೇರಿ ಇದ್ದುದರಿಂದ ನಮ್ಮ ಕಛೇರಿಗೆ ಬರುತ್ತಿದ್ದರು. ಅವರ ಕಛೇರಿಯಲ್ಲಿ ಮತ್ತೋರ್ವ ಹುಡುಗಿ ಕೆಲಸ ಮಾಡುತ್ತಿದ್ದರು. ಆರೋಪಿ ವಿಳಾಸ ಗೊತ್ತಿಲ್ಲ, ಅದರೆ ಅವರು ವಿವೇಕ ಕಾನ್ವೆಂಟ್ ನಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿರುತ್ತದೆ. ಎಷ್ಟು ವರ್ಷ ಕೆಲಸ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಅವರ ಕಛೇರಿ ಎಷ್ಟು ವರ್ಷ ಇತ್ತು ಎಂದು ನನಗೆ ಗೊತ್ತಿಲ್ಲ. ಅವರ ಫೈನಾನ್ಸ್ ಕಂಪನಿ ನೊಂದಣಿ ಆಗಿತ್ತೋ ಇಲ್ಲವೋ ಗೊತ್ತಿಲ್ಲ. ನಾನು 140 ಗ್ರಾಂ ಚಿನ್ನವನ್ನು ಅವರ ಬಳಿ ಗಿರವಿ ಇಟ್ಟಿದ್ದೆ. ಚಿನ್ನವನ್ನು ಪೋಲೀಸರು ಎಲ್ಲಿ ವಶಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಮುತ್ತೂಟ್ ಫೈನಾನ್ಸ್ ನಲ್ಲಿ ವಡವೆಗಳನ್ನು ಮೂರು ಜನರ ಹೆಸರಿನಲ್ಲಿ ಗಿರವಿ ಇಟ್ಟಿದ್ದರು. ರಾಜು, ಮಂಜುನಾಥ್, ಅಶೋಕ್ ರವರ ಹೆಸರಿನಲ್ಲಿ ಗಿರವಿ ಇಟ್ಟಿದ್ದರು. ಯಾವಾಗ ಗಿರವಿ ಇಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಪೋಲೀಸರು ನಮಗೆ ತಿಳಿಸಿದ ನಂತರ ಮುತ್ತೂಟ್ ಫೈನಾನ್ಸ್ ನಲ್ಲಿ ಗಿರವಿ ಇಟ್ಟ ಬಗ್ಗೆ ಗೊತ್ತಿರುತ್ತದೆ.

ನಾನು 140 ಗ್ರಾಂ ಚಿನ್ನವನ್ನು ಯಾರ ಯಾರ ಹೆಸರಿನಲ್ಲಿ ಗಿರವಿ ಇಟ್ಟಿದ್ದೆ ಎಂದು ನೆನಪಿಲ್ಲ. ಆರೋಪಿಗೆ ಎಷ್ಟು ಗ್ರಾಹಕರು ಇದ್ದರು ಎಂದು ನನಗೆ ಗೊತ್ತಿಲ್ಲ. ಅವರ ಕಛೇರಿಯಲ್ಲಿ ಮಾಡುತ್ತಿದ್ದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. ದೂರು ನೀಡಿದ ನಂತರ 7-8 ಬಾರಿ ನಾನು ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ಪೋಲೀಸರು ವಡವೆಯನ್ನು ಗುರುತಿಸಿದ ನಂತರ ಸಹಿ ಪಡೆದಿರುತ್ತಾರೆ. ಎಷ್ಟು ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ವಡವೆ ಚೀಟಿ ಮೇಲೆ ಸಹಿ ಮಾಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಹೋಗಿರುತ್ತೇವೆ. ಪ್ರತಿ ಬಾರಿ ನಾನು, ನನ್ನ ಗಂಡ ಇಬ್ಬರೂ ಠಾಣೆಗೆ ಹೋಗಿರುತ್ತೇವೆ. ನನ್ನ ಬಳಿ ಮಾತ್ರ ಸಹಿ ಪಡೆದಿರುತ್ತಾರೆ. ಸಹಿ ಮಾಡಿದ ದಿನಾಂಕ ನೆನಪಿಲ್ಲ. ಚಿನ್ನವನ್ನು ವಾಪಸ್ಸು ಪಡೆದ ನಂತರ ಸಹಿ ಮಾಡಿ ಹೋಗಿರುತ್ತೇವೆ. ಆನಂತರ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನಾನು ಆರೋಪಿ ಬಳಿ ಚಿನ್ನ ಗಿರವಿ ಇಟ್ಟ ಬಗ್ಗೆ ರಸೀದಿ ಪಡೆದಿರುತ್ತೇನೆ. ಸದರಿ ರಸೀದಿಯನ್ನು ಮುತ್ತೂಟ್

ಫೈನಾನ್ಸ್ ನಲ್ಲಿ ಕೊಟ್ಟಿರುತ್ತೇನೆ. ಆರೋಪಿ ಮತ್ತು ಉಳಿದ ಇಬ್ಬರು ಮುತ್ತೂಟ್ ಫೈನಾನ್ಸ್ ನಲ್ಲಿ ಒಟ್ಟು ಎಷ್ಟು ಚಿನ್ನವನ್ನು ಗಿರವಿ ಇಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮುತ್ತೂಟ್ ಫೈನಾನ್ಸ್ ನಲ್ಲಿ ನಾವು ವಿಚಾರ ಮಾಡಿರುವುದಿಲ್ಲ. ಪೋಲೀಸರು ಚಿನ್ನವನ್ನು ಜಪ್ತುಪಡಿಸಿಕೊಂಡ ಸಮಯದಲ್ಲಿ ನಾನು ಹಾಜರಿರಲಿಲ್ಲ. ಮುತ್ತೂಟ್ ಫೈನಾನ್ಸ್ ರವರು ಮಾಲೀಕರನ್ನು ಹೊರತುಪಡಿಸಿ ಬೇರೆ ಯಾರೋ ಹೆಸರಿನಲ್ಲಿ ಚಿನ್ನವನ್ನು ಅಡವಿಟ್ಟುಕೊಳ್ಳುವುದಿಲ್ಲ. ಆರೋಪಿ ಮುತ್ತೂಟ್ ಫೈನಾನ್ಸ್‌ನಲ್ಲಿ ಅಡಮಾನ ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಫೈನಾನ್ಸ್ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಯಾವುದೇ ಕಂಪನಿ ನೊಂದಣಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಚಿನ್ನವನ್ನು ಗಿರವಿ ಇಟ್ಟುಕೊಂಡಿರುವುದಿಲ್ಲ, ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರರೊಂದಿಗೆ ಶಾಮೀಲಾಗಿ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ ಸಕಲೇಶಪುರ**